ಮತ್ತೆ ಮೊದಲನೆಯ ಪ್ರಶ್ನೆ ಅವರು ಕೇಳಿದ್ದುದು ಏನೆಂದರೆ ಯಾವ ಯಾವ ಜಿಲ್ಲೆ ಎಂದು ಹೇಳುತ್ತಾರೆ, ಈಗ ಯಾವ ಯಾವ ಜಿಲ್ಲೆಯಲ್ಲಿ ಈ ಕಾಲೇಜು ಇರಲಿಲ್ಲವೋ ಆ ಎಲ್ಲಾ ಜಿಲ್ಲೆಗಳಲ್ಲೂ ಹಂತಹಂತವಾಗಿ ಸ್ಥಾಪಿಸಬೇಕು ಎಂಬುದು ಸರ್ಕಾರದ ಉದ್ದೇಶವಾಗಿದೆ.

ಶ್ರೀಮತಿ ಬಿ.ಟಿ. ಲಲಿತಾನಾಯಕ್: ಮಾನ್ಯ ಅಧ್ಯಕ್ಷರೆ, ಈ ಕೃಷಿ ಕಾಲೇಜಿನಲ್ಲಿ ಕೆಲವು ವಿದ್ಯಾರ್ಥಿಗಳು ಕನ್ನಡದಲ್ಲಿ ಟೀಚಿಂಗ್ ಮಾಡುವುದಿಲ್ಲ ಎನ್ನುವ ದೂರನ್ನು ಹೇಳಿದ್ದರು, ಇದನ್ನು ನಾನು ಮಾನ್ಯ ಮಂತ್ರಿಗಳಿಗೆ ಹೇಳಿದ್ದೆ, ಆ ಹುಡುಗರಿಗೆ ಎಷ್ಟು ತೊಂದರೆಯಾಯಿತು ಎಂದರೆ ಕೊನೆಗೂ ಅವರಿಗೋಸ್ಕರ ಆ ಸಬ್ಜೆಕ್ಟ್ ಇದ್ದರೂ ಕೂಡ ಸೇರಿಸಿಕೊಳ್ಳಲಿಲ್ಲ ಇದರ ಬಗ್ಗೆ ದಯವಿಟ್ಟು ಏನಾದರೂ ಆಲೋಚನೆ ಇದೆಯೇ? ಕೃಷಿಯಲ್ಲಿ ಬರೀ ಇಂಗ್ಲೀಷ್‌ನಲ್ಲಿ ಪಾಠ ಮಾಡುವಂಥ ವ್ಯವಸ್ಥೆ ಇದೆ, ಕನ್ನಡದ ಮಕ್ಕಳಿಗೆ ನೊಗ, ನೇಗಿಲು ಎಲ್ಲಾ ಇಂಗ್ಲೀಷ್‌ನಲ್ಲಿ ಹೇಳಬೇಕೆಂದರೆ, ಬಹಳ ಕಷ್ಟವಾಗುತ್ತದೆ ಆದ್ದರಿಂದ ಅವರು ಏನು ಮಾಡಿದ್ದಾರೆ ಎನ್ನುವುದನ್ನು ತಮ್ಮ ಮೂಲಕ ಕೇಳುತ್ತಿದ್ದೇನೆ.

ಶ್ರೀ ಸಿ. ಬೈರೇಗೌಡ: ಮಾನ್ಯ ಅಧ್ಯಕ್ಷರೆ, ಕೆಲವು ವಿದ್ಯಾರ್ಥಿಗಳು ಅಂತ ಅಂದರೆ ಅವರು ಮೊದಲು ಕೃಷಿ ಸಹಾಯಕರಾಗಿದ್ದರು, ಅವರು ಎಸ್.ಎಸ್.ಎಲ್.ಸಿ. ಓದಿರತಕ್ಕಂಥಹವರು. ಅಂತಹವರನ್ನು ಇವರು ಹೈಯರ್ ಎಜುಕೇಷನ್‌ಗೋಸ್ಕರ ಡೆಪ್ಯೂಟ್ ಮಾಡಿದ್ದುದು ನಿಜ. ಅಂತವರು ಕನ್ನಡದಲ್ಲಿ ಕಲಿಯಬೇಕೆನ್ನುವಂಥದ್ದು ಈ ವಿಷಯವಾಗಿ ನನಗೂ ಮನವಿ ಮಾಡಿದರು. ಮಾನ್ಯ ಸದಸ್ಯರು ಕೂಡ ಈ ವಿಚಾರವನ್ನು ಅನೇಕ ಸಾರಿ ತಿಳಿಸಿದ್ದಾರೆ. ಆದರೆ ಕೆಲವು ತಾಂತ್ರಿಕ ಕಾರಣಗಳಿಂದ ಅದನ್ನು ಕನ್ನಡದಲ್ಲಿ ಭೋಧನೆ ಮಾಡುವುದಕ್ಕೆ ಸಾಧ್ಯವಾಗಲಿಲ್ಲ. ಬೆಂಗಳೂರು ವಿಶ್ವಧ್ಯಾನಿಲಯದಲ್ಲಿ ಕನ್ನಡದಲ್ಲಿ ಭೋಧನೆ ಮಾಡುವಂತಹ ವ್ಯವಸ್ಥೆ ಇದೆ. ಆದರೆ ವಿದ್ಯಾರ್ಥಿಗಳು ನಾವು ಕನ್ನಡದಲ್ಲಿ ಕಲಿಯುತ್ತೇವೆಂದು ಮುಂದೆ ಬರುತ್ತಾ ಇಲ್ಲ. ಈ ಕಾರಣದಿಂದ ಇವತ್ತಿನ ದಿವಸ ಇದು ಸಾಧ್ಯವಾಗುತ್ತಿಲ್ಲವೆನ್ನುವಂತಹ ಮಾತನ್ನು ಹೇಳಬಯಸುತ್ತೇನೆ.

ಅಧ್ಯಕ್ಷರು: ನಿಮ್ಮ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರನ್ನು ಕೇಳಿದ್ದೀರಿ. ಆದರೆ ಇದು ಸಮಾಜ ಕಲ್ಯಾಣ ಸಚಿವರಿಗೆ ಬರುತ್ತದೆ. ಆದುದರಿಂದ ಇದನ್ನು ಅವರ ಪ್ರಶ್ನೋತ್ತರ ಇದ್ದ ದಿವಸ ತೆಗೆದುಕೊಳ್ಳುತ್ತೇವೆ.

ಪಾಂಡವಪುರದಲ್ಲಿ ಬಸ್ ಸ್ಟಾ ್ಯಂಡ್ ನಿರ್ಮಾಣ.

108 (986) ಶ್ರೀ ಕೆ.ಎನ್.ಪುಟ್ಟಣ್ಣಯ್ಯ (ಪಾಂಡವಪುರ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಪಾಂಡವಪುರ ತಾಲ್ಲೂಕಿಗೆ ಬಸ್ ನಿಲ್ದಾಣ ನಿರ್ಮಾಣ ಮಾಡುವ ಬಗ್ಗೆ ಇದುವರೆವಿಗೆ ಸರ್ಕಾರವು ಕೈಗೊಂಡ ಕ್ರಮಗಳೇನು?

ಆ) ಬಸ್ ನಿಲ್ದಾಣವಿಲ್ಲದಿದ್ದರಿಂದ ಸಾರ್ವಜನಿಕರಿಗೆ ತೊಂದರೆಯಾಗುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಇ) ಹಾಗಿದ್ದಲ್ಲಿ ಈ ಬಸ್ ನಿಲ್ದಾಣದ ನಿರ್ಮಾಣದ ಕಾರ್ಯವನ್ನು ಇನ್ನು ಎಷ್ಟು ದಿವಸಗಳಲ್ಲಿ ಕೈಗೆತ್ತಿಕೊಳ್ಳಲಾಗುವುದು?

ಶ್ರೀ ಪಿ.ಜಿ.ಆರ್. ಸಿಂಧ್ಯ (ಸಾರಿಗೆ ಸಚಿವರು)

ಅ) ಪಾಂಡವಪುರವು ರಾಷ್ಟ್ರೀಕೃತವಲ್ಲದ ವಲಯದಲ್ಲಿರುವುದರಿಂದ ಅಲ್ಲಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಬಸ್ ನಿಲ್ದಾಣವನ್ನು ಕೂಡಲೇ ನಿರ್ಮಿಸುವ ಪ್ರಸ್ತಾವನೆ ಇರುವುದಿಲ್ಲ.

ಆ) ಪಾಂಡವಪುರದಲ್ಲಿ ಪುರಸಭೆಯ ಬಸ್ ನಿಲ್ದಾಣವಿರುವುದರಿಂದಸರ್ಕಾರಿ ಸಾರ್ವಜನಿಕರಿಗೆ ಎಷ್ಟು ತೊಂದರೆಗಳಾಗುತ್ತಿಲ್ಲ.

ಇ) ಉದ್ಭವಿಸುವುದಿಲ್ಲ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ:- ಮಾನ್ಯ ಅಧ್ಯಕ್ಷರೆ, ಉತ್ತರವನ್ನು ಒದಗಿಸಿದ್ದಾರೆ ಮತ್ತು ನಾನು ಖಾಸಗಿಯಾಗಿಯೂ ಮಾತನಾಡಿದ್ದೇನೆ. ಆ ಸ್ಥಳವನ್ನು ತೆಗೆದುಕೊಳ್ಳುವುದಕ್ಕೆ ಹಣವನ್ನು ಮಂಜೂರು ಮಾಡುವಂತಹ ವ್ಯವಸ್ಥೆ ಇದೆಯೆ ಎಂಬುದನ್ನು ಮಾನ್ಯ ಸಚಿವರು ತಿಳಿಸಬೇಕು.

ಶ್ರೀ ಪಿ.ಬಿ.ಆರ್.ಸಿಂಧ್ಯ: ನಾನು ಉತ್ತರದಲ್ಲೆ ತಿಳಿಸಿದ್ದೇನೆ. ಪಾಂಡವಪುರ ರಾಷ್ಟ್ರೀಕರಣವಾದರೆ ಇರುವಂತಹ ಪ್ರದೇಶವಾಗಿರುವುದರಿಂದ ಅಲ್ಲಿ ಬಸ್ಸು ನಿಲ್ದಾಣಕ್ಕೆ ಆದ್ಯತೆಯನ್ನು ಕೊಡುವುದಕ್ಕಾಗುವುದಿಲ್ಲವೆಂದು ಹೇಳಿದ್ದೇನೆ. ಆದರೆ ಜಾಗವನ್ನು ತೆಗೆದುಕೊಂಡು ಕ್ರಮ ತೆಗೆದುಕೊಳ್ಳಬೇಕೆಂದು ಮಾನ್ಯ ಪುಟ್ಟಣ್ಣಯ್ಯನವರು ಒತ್ತಾಯ ಮಾಡಿದ್ದಾರೆ. ಆದುದರಿಂದ ನಾನು ಇದನ್ನು ಗಮನದಲ್ಲಿಟ್ಟುಕೊಳ್ಳುತ್ತೇನೆ. ನಿಜ, ಇವತ್ತು ಅಲ್ಲಿ ಬಸ್ಸು ನಿಲ್ದಾಣವನ್ನು ಕಟ್ಟಬೇಕಾಗುತ್ತದೆ. ಅದಕ್ಕೋಸ್ಕರ ಜಾಗವನ್ನು ತೆಗೆದುಕೊಳ್ಳುವುದಕ್ಕೆ ಕ್ರಮವನ್ನು ತೆಗೆದುಕೊಳ್ಳುತ್ತೇನೆ.

ರಾಜ್ಯದಲ್ಲಿ ತಂಡಗಳ ಘೋಷಣೆ.

109 (771) ಶ್ರೀ ರೇವೂನಾಯಕ್ ಬೆಳಮಗಿ (ಕಮಲಾಪುರ) : ಮಾನ್ಯ ಕಂದಾಯ ಸಚಿವರು ಈ ಕೆಳಖಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ ಎಷ್ಟು ತಾಂಡಗಳನ್ನು ಗುರ್ತಿಸಲಾಗಿದೆ. (ಜಿಲ್ಲಾವಾರು ವಿವರ ನೀಡುವುದು). ಎಷ್ಟು ತಾಂಡಗಳನ್ನು ಗುರುತಿಸಲು ಸರ್ಕಾರ ಯೋಚಿಸಿದೆ?

ಆ) ಗುಲ್ಬರ್ಗಾ ಜಿಲ್ಲೆಯಲ್ಲಿ ಎಷ್ಟು ತಾಂಡಗಳನ್ನು ಗುರ್ತಿಸಲಾಗಿದೆ? (ತಾಲ್ಲೂಕುವಾರು ವಿವರ ನೀಡುವುದು). ಇನ್ನೂ ಎಷ್ಟು ಗುರುತಿಸಲು ಸರ್ಕಾರವು ಯೋಚಿಸಿದೆ.

ಶ್ರೀ ರಮೇಶ್ ಸಿ. ಜಿಗಜಿಣಗಿ (ಕಂದಾಯ ಸಚಿವರು)

ಅ) 449 ತಾಂಡ: ಹ್ಯಾಮಲೆಟ್‌ಗಳನ್ನು ಗುರ್ತಿಸಿದೆ. ಜಿಲ್ಲಾವಾರು ವಿವರ ಕೆಳಕಂಡಂತಿದೆ: